ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 01.04.2024.

**ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ:**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಆರು ಕೈ ಬರಹದ ಪಹಣಿಗಳನ್ನು ಕ್ರಮವಾಗಿ ನಿಪಿ-1 ಎಂದು ನಿಪಿ-6 ಎಂದು, ಸರ್ವೆ ನಂ.298/ಕ ಇದರ ಆರ್‌ಟಿಸಿಯನ್ನು ನಿಪಿ-7 ಎಂದು, ಸರ್ವೆ ನಂ.298 ರ 2018-19 ನೇ ಸಾಲಿನಿಂದ 2023-24 ನೇ ಸಾಲಿನವರೆಗೆ ಇರುವ ಗಣಕೀಕೃತ ಪಹಣಿಗಳನ್ನು ಒಟ್ಟಾರೆ ನಿಪಿ-8 ಎಂದು, ಟೊಂಚ್ ನಕಾಶೆಯನ್ನು ನಿಪಿ-9 ಎಂದು, ಸರ್ವೆ ನಂ.298/ಅ ಇದರ 2003-04 ನೇ ಸಾಲಿನಿಂದ 2016-17 ನೇ ಸಾಲಿನವರೆಗೆ ಇರುವ ಗಣಕೀಕೃತ ಪಹಣಿಗಳನ್ನು ಒಟ್ಟಾರೆ ನಿಪಿ-10 ಎಂದು, ಸರ್ವೆ ನಂ.298/ಬ ಇದರ 2003-04 ನೇ ಸಾಲಿನಿಂದ 2016-17 ನೇ ಸಾಲಿನವರೆಗೆ ಇರುವ ಗಣಕೀಕೃತ ಪಹಣಿಗಳನ್ನು ಒಟ್ಟಾರೆ ನಿಪಿ-11 ಎಂದು, ಸರ್ವೆ ನಂ.298/ಕ ಇದರ 2003-04 ನೇ ಸಾಲಿನಿಂದ 2005-06 ನೇ ಸಾಲಿನವರೆಗೆ ಇರುವ ಗಣಕೀಕೃತ ಪಹಣಿಗಳನ್ನು ಒಟ್ಟಾರೆ ನಿಪಿ-12 ಎಂದು,

ಸರ್ವೆ ನಂ.2/ಅ ಇದರ ಕೈಬರಹದ ಪಹಣಿಯನ್ನು ನಿಪಿ-13 ಎಂದು, ಸರ್ವೆ ನಂ.2/ಅ ಇದರ 2003-04 ನೇ ಸಾಲಿನಿಂದ 2018-19 ನೇ ಸಾಲಿನವರೆಗೆ ಇರುವ ಗಣಕೀಕೃತ ಪಹಣಿಗಳನ್ನು ಒಟ್ಟಾರೆ ನಿಪಿ-14 ಎಂದು, ಸರ್ವೆ ನಂ.2 ರ 2019-20 ನೇ ಸಾಲಿನಿಂದ 2023-24 ನೇ ಸಾಲಿನವರೆಗೆ ಇರುವ ಗಣಕೀಕೃತ ಪಹಣಿಗಳನ್ನು ಒಟ್ಟಾರೆ ನಿಪಿ-15 ಎಂದು, ಟೋಂಚ್ ನಕಾಶೆಯನ್ನು ನಿಪಿ-16 ಎಂದು, ಕೈ ಬರಹದ ಪಹಣಿಯನ್ನು ನಿಪಿ-17 ಎಂದು, ಸರ್ವೆ ನಂ.51/ಇ 2003-04 ನೇ ಸಾಲಿನಿಂದ 2014-15 ನೇ ಸಾಲಿನವರೆಗೆ ಇರುವ ಗಣಕೀಕೃತ ಪಹಣಿಗಳನ್ನು ಒಟ್ಟಾರೆ ನಿಪಿ-18 ಎಂದು, ಸರ್ವೆ ನಂ.51 ರ 2015-16 ನೇ ಸಾಲಿನಿಂದ 2023-24 ನೇ ಸಾಲಿನವರೆಗೆ ಇರುವ ಗಣಕೀಕೃತ ಪಹಣಿಗಳನ್ನು ಒಟ್ಟಾರೆ ನಿಪಿ-19 ಎಂದು, ಟೋಂಚ್ ನಕಾಶೆಯನ್ನು ನಿಪಿ-20 ಎಂದು, ನನ್ನ ವಕೀಲರ ಮುಖಾಂತರ ಕಳುಹಿಸಿದ ನೋಟೀಸ್‌ನ ಪ್ರತಿಯನ್ನು ನಿಪಿ-21 ಎಂದು, ಮೂರು ಅಂಚೆ ರಶೀದಿಗಳನ್ನು ಒಟ್ಟಾಗಿ ನಿಪಿ-22 ಎಂದು, ಅಂಚೆ ಇಲಾಖೆಗೆ ಕಳುಹಿಸಿದ ಅಂಚೆ ನೋಟಿಸ್ ಪ್ರತಿಯನ್ನು ನಿಪಿ-23 ಎಂದು, ಅಂಚೆ ಇಲಾಖೆ ನೀಡಿದ ಪತ್ರವನ್ನು ನಿಪಿ-24 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**